ದಿಃ13.06.2023 OS No. 45/2019 PW-2

ದಿಃ13.06.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ.ಎಸ್.ಬಿ.ಡಿ ವಕೀಲರಿಂದ

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ವಾದಿಯ ಜೊತೆ ನಾನು ಕಾಲೇಜಿನಲ್ಲಿ ಸಹೋದ್ಯೋಗಿ ಆಗಿ 30 ವರ್ಷಗಳ ಕಾಲ ಕೆಲಸ ಮಾಡಿರುತ್ತೇನೆ. ನಾನು ವಾದಿಯು ಮಾಡುವ ಎಲ್ಲಾ ವ್ಯವಹಾರಗಳಲ್ಲಿ ಭಾಗವಹಿಸುವುದಿಲ್ಲ. 2000 ಇಸವಿಯಲ್ಲಿ ಕ್ರಯದ ಮಾತುಕತೆ ಆಗಿರುತ್ತದೆ. ಬಹಳ ವರ್ಷಗಳು ಆಗಿರುವುದರಿಂದ ತಿಂಗಳು ಮತ್ತು ದಿನಾಂಕ ನೆನಪಿರುವುದಿಲ್ಲ. 2000 ಇಸವಿಯಲ್ಲಿ ಮಾತುಕತೆ ಆಗಿ 2 ಲಕ್ಷದ 48 ಸಾವಿರಗಳನ್ನು ಮುಂಗಡವಾಗಿ ಕೊಡಲಾಗಿರುತ್ತದೆ. ನಾನು ಹೇಳುವಂತೆ ಯಾವುದೇ ಮಾತುಕತೆ ಆಗದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೂ ಕ್ರಯದ ಕರಾರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವತ್ತನ್ನು ಕಬಳಿಸಲು ನಿಪಿ.1 ಅನ್ನು ವಾದಿಯ ಜೊತೆ ಸೇರಿ ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ಕ್ಕೂ ಮತ್ತು ನನಗೂ ಯಾವುದೇ ಸಂಬಂಧವಿರುವುದಿಲ್ಲ ಅದರಲ್ಲಿ ಪೂರ್ಣ ವಿಳಾಸವನ್ನು ಬರೆಯದೇ ಇರುವ ಕಾರಣ ಅದು ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.